CAREERINDIA

# KANNADA (015)

**ಅಂತಿಮ ಪರೀಕ್ಷೆ(2017–18) ಮಾರ್ಚ್.**

**ವಿಷಯ: ಭಾಷೆ ಕನ್ನಡ.**

**ತರಗತಿ: ಹತ್ತು.**

**ಮಾದರಿ ಉತ್ತರಗಳು/ ಅಂಕಗಳ ವಿತರಣೆ**

## ವಿಭಾಗ–A

**I (ವಾಚನ ಮತ್ತು ಗ್ರಹಿಕಾ ಕೌಶಲ): 12 ಅಂಕಗಳು.**

1. ವನ್ಯಜೀವಿಗಳ ಗಣತಿಯಿಂದ ಒಂದು ಜೀವಿ ಬದುಕಿ ಉಳಿಯಲು ಎಷ್ಟು ಆಹಾರ ಬೇಕು ಎಂಬುದು ಮತ್ತು ಅಷ್ಟು ಆಹಾರ ಸದರಿ ಕಾಡಿನಲ್ಲಿ ಲಭ್ಯವೇ ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬಹುದು. ( 2 )

2.ಜಾಗತಿಕವಾಗಿ ಬಳಸುತ್ತಿರುವ ಗಣತಿ ಪದ್ಧತಿಯನ್ನು ಕನ್ನಡಿಗರೇ ಆದ ಡಾ. ಉಲ್ಲಾಸ ಕಾರಂತರು ಅಭಿವೃದ್ಧಿ ಪಡಿಸಿದರು.(1)

3.ಬಲಿ ಪ್ರಾಣಿಗಳ ಗಣತಿಗೆ ಸೀಳುದಾರಿ ಗಣತಿ ಎಂಬ ಪದ್ಧತಿಯನ್ನು ಬಳಸಲಾಗುತ್ತದೆ.(1)

4.ಬೇಟೆಗಾರ ಪ್ರಾಣಿಗಳ ಗಣತಿಗೆ ಗುರುತು ಮತ್ತು ಚುಕ್ಕೆಗಳಿರುವ ಪ್ರಾಣಿಗಳ ಗಣತಿಗೆ ಕ್ಯಾಮರಾ ಟ್ರಾಪ್ ಸೆರೆಹಿಡಿ, ಮರು ಸೆರೆಹಿಡಿ ಪದ್ಧತಿಯನ್ನು ಬಳಸಲಾಗುತ್ತದೆ. (2)

**2**

1. ಕವಿಯು ಮತಗಳನ್ನು ಒಂದು ತೋಟದಲ್ಲಿನ ಹಲವು ಬಣ್ಣದ ಹೂಗಳಿಗೆ ಹೋಲಿಸಿದ್ದಾರೆ.(1)

2.ಸೃಷ್ಟಿಯಲ್ಲಿ ಸರ್ವರೂ ಸಮವೆಂದು ತಿಳಿದು, ಭೇದ ಮರೆತು ಬಾಳಬೇಕು.(1)

3.ನಮ್ಮ ನಾಡು ದಯವೇ ಧರ್ಮವೆಂದು ಸಾರಿದ ನಾಡು.

ಜನತೆಗೆ ಶಾಂತಿಪಾಠವನ್ನು ಹೇಳಿದ ನಾಡು.(2)

www.careerindia.com

4.ಕವಿಯು ಸಂತರು ಸೂರ್ಯನಂತೆ ಜಗತ್ತನ್ನು ಬೆಳಗುವರೆಂದು ಮತ್ತು ವರುಣನಂತೆ ಜ್ಞಾನವನ್ನು ಸುರಿದು ಹೋಗುವಂತವರು ಎಂದು ಹೇಳಿದ್ದಾರೆ. (2)

## ವಿಭಾಗ–B

### (ಬರವಣಿಗೆ ಕೌಶಲ):15 ಅಂಕಗಳು

**II**

* ಪೀಠಿಕೆ 1

* ವಿಷಯ ಸಂಗ್ರಹ. 3

* ಉಪಸಂಹಾರ 1

* ಭಾಷಾಸಾಮರ್ಥ್ಯ.(ನಿರೂಪಣೆಯಲ್ಲಿ ಭಾಷೆಯ ಹಿಡಿತ) 1

**III** ಪತ್ರಲೇಖನ (ಗೆಳೆಯ/ಗೆಳತಿಗೆ)

* ಕ್ಷೇಮ ಮತ್ತು ಶ್ರೀ $^1/_2$

* ಇಂದ ವಿಳಾಸ ಮತ್ತು ದಿನಾಂಕ $^1/_2$

* ಪತ್ರದಲ್ಲಿ ಆರಂಭದ ಸಂಬೋಧನೆ(ಒಕ್ಕಣೆ) $^1/_2$

* ಪತ್ರದ ಒಡಲು (ಸಮ್ಮೇಳನ ನಡೆದ ಸ್ಥಳ. . .ಇತ್ಯಾದಿ ಬರವಣಿಗೆ ಕೌಶಲ, ನಿರೂಪಣೆ, ಭಾಷಾಸಾಮರ್ಥ್ಯ ) 2

* ಮುಕ್ತಾಯದ ಒಕ್ಕಣೆ ಮತ್ತು ಸಹಿ $^1/_2$

* ಅವರಿಗೆ ವಿಳಾಸ $^1/_2$

www.careerindia.com

ವ್ಯಾವಹಾರಿಕ ಪತ್ರ – (ಘಟಕ ವ್ಯವಸ್ಥಾಪಕರಿಗೆ)

- ದಿನಾಂಕ ಮತ್ತು ಸ್ಥಳ $^1/_2$
- ಇಂದ ವಿಳಾಸ $^1/_2$
- ಅವರಿಗೆ ವಿಳಾಸ $^1/_2$
- ಮಾನ್ಯರೇ $^1/_2$
- ವಿಷಯ $^1/_2$
- ಪತ್ರದ ಒಡಲು ( ವಿಷಯದ ಪ್ರಸ್ತಾವನೆ, ಬರವಣಿಗೆ ಕೌಶಲ) 2 1/2
- ತಮ್ಮ ವಿಶ್ವಾಸಿ $^1/_2$

**IV** . ವರದಿ .

* ಸ್ಥಳ $^1/_2$

* ದಿನಾಂಕ $^1/_2$

* ವರದಿಗೆ ಹೊಂದುವಂತಹ ಶೀರ್ಷಿಕೆ $^1/_2$

* ವರದಿಯ ಒಡಲು.( ಬರವಣಿಗೆ ಕೌಶಲ, ಘಟನೆಯ ಸೃಷ್ಟಿ ಎಲ್ಲಿ, ಯಾರು,ಯಾವಾಗ..ಇತ್ಯಾದಿ.) 2

* ವರದಿಗಾರರ ರುಜು. $^1/_2$

ವಿಭಾಗ – C

(ಅನ್ವಯಿಕ ವ್ಯಾಕರಣ): 18 ಅಂಕಗಳು

**V.**

1. 1.ಪ್ರತಿ + ಅಕ್ಷ ($^1/_2$ )ಬಿಡಿಸು= ಯಣ್‌ಸಂಧಿ.( $^1/_2$)ಹೆಸರಿಸು

www.careerindia.com

CAREERINDIA

2.ಲೇಖನವನು + ಓದಿ($^1/_2$ )ಬಿಡಿಸು = ಲೋಪಸಂಧಿ.( $^1/_2$ )ಹೆಸರಿಸು

2. 1.ಪರರ + ಧನ ($^1/_2$) ವಿಗ್ರಹವಾಕ್ಯ –> ತತ್ಪುರುಷ ಸಮಾಸ ($^1/_2$) ಸಮಾಸದ ಹೆಸರು

2.ಮೂರು + ಗಾವುದ ($^1/_2$ ) ವಿಗ್ರಹವಾಕ್ಯ –> ದ್ವಿಗುಸಮಾಸ ($^1/_2$) ಸಮಾಸದ ಹೆಸರು

3. 1. ಬಿಜ್ಜೋದರ $^1/_2$ 2. ಕಾರ್ಯ $^1/_2$

4. 1. ಇಗೆ – ಚತುರ್ಥಿ $^1/_2$ 2. ಅನ್ನು – ದ್ವಿತೀಯ $^1/_2$

5. 1. ಗುಡಿ – ಗೋಪುರ ($^1/_2$) 2. ಕುಂದು – ಕೊರತೆ ($^1/_2$)

6. 1. ಅದಕ್ಷತೆ ($^1/_2$) 2. ಅವನತಿ ($^1/_2$)

7. 1. ಬಯಕೆ ($^1/_2$)

2. ಮಾರಿ (ಮಾರಮ್ಮ ದೇವರು, ಉಗ್ರದೇವತೆ, ಕ್ಷುದ್ರದೇವತೆ)

8. 1. ಕಟ್ಟು ($^1/_2$) 2. ತಿನ್ನು ($^1/_2$)

9. 1. ಮಕ್ಕಳು ಕಥೆ ಪುಸ್ತಕವನ್ನು ಓದಿದರು .(ಓದಿದ್ದರು , ಓದಿದ್ದಾರೆ)

10. 1. ಅನುಕರಣಾವ್ಯಯ ($^1/_2$) 2. ಪರಿಮಾಣ ವಾಚಕ($^1/_2$)

11. 1. ನಮ್ಮಿಂದ ನಮ್ಮೂರ ಜಾತ್ರೆಯು ಸಡಗರದಿಂದ ಮಾಡಲ್ಪಟ್ಟಿತು. ಅಥವಾ

ನಮ್ಮೂರ ಜಾತ್ರೆಯು ನಮ್ಮಿಂದ ಸಡಗರದಿಂದ ಮಾಡಲ್ಪಟ್ಟಿತು.

12. 1. ಗುಣವಂತರು ದುಷ್ಟರ ಗೆಳೆತನವನ್ನು ಮಾಡರು.

13. 1. ಕೈಹಾಕು = ಕೆಲಸ ಆರಂಭಿಸು. ಪ್ರಾರಂಭಿಸು.

2.ಕಕ್ಕಾಬಿಕ್ಕಿ = ಆಶ್ಚರ್ಯ, ಗಾಬರಿ.

14. 1. ನಡೆದು ಹೋದ ಕಹಿ ಘಟನೆಯನ್ನು ನೆನೆಯುತ್ತ ಸೊರಗುವುದರಿಂದ ಯಾವ ಪ್ರಯೋಜನವಿಲ್ಲ.(1ಅಂಕ)

ಅರ್ಥಕ್ಕೆ ತಕ್ಕ ಉದಾಹರಣೆ (1ಅಂಕ)

www.careerindia.com

CAREERINDIA

ಉದಾಹರಣೆಯೊಂದಿಗೆ ಗಾದೆಯ ಅರ್ಥವಿವರಣೆ ನೀಡಿದರೂ (2ಅಂಕಗಳು)

2.ಅರ್ಹತೆಗೆ ತಕ್ಕಂತೆ ಪ್ರತಿಫಲ. ಹಣಕ್ಕೆ ತಕ್ಕಂತೆ ವಸ್ತು.

ಕ್ರಿಯೆಗೆ ತಕ್ಕ ಪ್ರತಿಫಲ.(1 ಅಂಕ)

ಅರ್ಥಕ್ಕೆ ತಕ್ಕ ಉದಾಹರಣೆಗೆ (1ಅಂಕ)

ಉದಾಹರಣೆಯೊಂದಿಗೆ ಗಾದೆಯ ಅರ್ಥವಿವರಣೆ ನೀಡಿದರೂ (2ಅಂಕಗಳು)

## ವಿಭಾಗ – D

(ಪದ್ಯಗಳ ಅಧ್ಯಯನ) : 35 ಅಂಕಗಳು

**VI.** ಬಹು ಆಯ್ಕೆ ಪ್ರಶ್ನೆಗೆ ಉತ್ತರಗಳು.

1. 1913 ರಲ್ಲಿ ( 1 )
2. ವಚನ ಸಾಹಿತ್ಯ ( 1 )
3. ಪ್ರೇಮಮತಿ ( 1 )
4. ಭಗವದ್ಗೀತೆಯಲ್ಲಿ ( 1 )
5. ಇರಸಾಲು ( 1 )
6. ಮುಂಗಾರಿನ ( 1 )
7. ಕರ್ಣ ( 1 )
8. ಶತ್ರುಘ್ನ ( 1 )
9. ಮಣ್ಣಿಗೆ ( 1 )
10. ಸಂಕಟ ( 1 )

www.careerindia.com

VII. ಈ ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿ. (12 ಅಂಕಗಳು)

1. ಉತ್ತರ:–ವಿಶ್ವೇಶ್ವರಯ್ಯನವರು ಎಂಜಿನಿಯರುಗಳಿಗೆ "ನಮ್ಮ ಕೆಲಸಗಳು ಪ್ರಮಾಣದಲ್ಲಿ ಚಿಕ್ಕದಿರಬಹುದು, ಆದರೆ ಪ್ರಪಂಚದಾದ್ಯಂತ ಯಾವುದೇ ವರ್ಗದ ಕಾಮಗಾರಿಯ ಎಂಜಿನಿಯರಿಂಗ್ ಗುಣಲಕ್ಷಣಗಳು ಒಂದೇ ಆಗಿರುತ್ತವೆ. ಈ ಕಾಮಗಾರಿಗಳನ್ನು ಕುಶಲತೆ ಮತ್ತು ಕಡಿಮೆ ವೆಚ್ಚದಲ್ಲಿ ಕಾರ್ಯಗತಗೊಳಿಸಬೇಕೆಂದರೆ ಇತರ ಯಾವುದೇ ದೇಶದ ಎಂಜಿನಿಯರ್ ಪಡೆಯುವಷ್ಟೇ ತರಬೇತಿ ಮತ್ತು ಜ್ಞಾನವನ್ನು ಪಡೆಯಬೇಕು. ಮಾಹಿತಿಗಳಲ್ಲಾಗಲಿ , ವಿಧಾನಗಳಲ್ಲಾಗಲಿ ನಾವು ಹಿಂದುಳಿಯುವುದು ಉಚಿತವಲ್ಲ". ಎಂದು ಮಾರ್ಗದರ್ಶನ ಮಾಡಿದರು. ( 3 )

2. ಸಂದರ್ಭದೊಂದಿಗೆ ವಿವರಿಸಿ.

"ಹುಸಿಯದ ಬೇಹಾರಿಯೇ ಇಲ್ಲ".

ಉತ್ತರ: – ಈ ವಾಕ್ಯವನ್ನು ದುರ್ಗಸಿಂಹ ಕವಿಯ 'ಕರ್ಣಾಟಕ ಪಂಚತಂತ್ರ'ದ 'ವೃಕ್ಷಸಾಕ್ಷಿ'ಎಂಬ ಗದ್ಯದಿಂದ ಆರಿಸಲಾಗಿದೆ. (1)

ಈ ಮಾತನ್ನು ಧರ್ಮಬುದ್ಧಿಯು ಧರ್ಮಾಧಿಕರಣರ ಮುಂದೆ ಹೇಳಿದ್ದಾನೆ. ($^1/_2$)

ಧರ್ಮಬುದ್ಧಿಯು ಮಾಡದಿರುವ ತಪ್ಪನ್ನು ಮಾಡಿರುವೆನೆಂದು ವೃಕ್ಷವು ಸಾಕ್ಷಿ ಹೇಳಿದಾಗ ಧರ್ಮಬುದ್ಧಿಗೆ ಇಲ್ಲೇನೋ ಮೋಸವಿದೆ ಎನ್ನುವ ಸಂಶಯ ಉಂಟಾಗುತ್ತದೆ. ಆಗ ಅವನು ಆ ಅರಳೀಮರಕ್ಕೆ ಪ್ರದಕ್ಷಿಣೆ ಹಾಕಿ ಬರುತ್ತಾನೆ. ಅದರಲ್ಲಿರುವ ಪೊಟರೆಯನ್ನು, ಅಲ್ಲಿ ಜನರು ಒಡಾಡಿರುವ ಕುರುಹನ್ನೂ ಗಮನಿಸುತ್ತಾನೆ. ಆಗ ಅವನಿಗೆ ಸಂದೇಹ ನಿಜವೆನಿಸುತ್ತದೆ. ತಮ್ಮ ಸಂದೇಹದ ನೈಜ ಚಿತ್ರವನ್ನು ಹೊರತರಲು ಅವನು ಕತೆಯೊಂದು ಕಟ್ಟುತ್ತಾನೆ. ಸುಳ್ಳು ನುಡಿಯದ ವ್ಯಾಪಾರಿಯೇ ಇಲ್ಲ. ಅದು ವ್ಯಾಪಾರಿಗಳ ಧರ್ಮ. ನಾನೂ ವ್ಯಾಪಾರಿಯೇ ಸುಳ್ಳು ಹೇಳಿದ್ದೇನೆ. ನಾನು ಹಣ ಒಯ್ಯಲು ಪ್ರಯತ್ನಿಸಿದ್ದು ನಿಜ. ಅದೀಗ ಮರದ ಪೊಟರೆಯಲ್ಲಿ ಹಾವಿನ ವಶದಲ್ಲಿದೆ. ಬೆಂಕಿಹಾಕಿ ಅದನ್ನು ಹೊರತಂದು ಹಣವನ್ನು ಒಪ್ಪಿಸುತ್ತೇನೆ ಎಂದು ಧರ್ಮಬುದ್ಧಿಯು ಧರ್ಮಾಧಿಕರಣರ ಮುಂದೆ ಹೇಳುತ್ತಾನೆ. ($1^1/_2$)

ಅಥವಾ

“ನಾನು ಮುಖ ಮೇಲಾಗಿ ಬಿದ್ದಿದ್ದೆನೆ”.

ಉತ್ತರ:– ಈ ಮೇಲಿನ ವಾಕ್ಯವನ್ನು ಎ.ಎನ್ ಮೂರ್ತಿರಾಯರು ಬರೆದ ‘ಸಮಗ್ರ ಲಲಿತಪ್ರಬಂಧಗಳು’ಎಂಬ ಸಂಕಲನದಿಂದ ಆರಿಸಲಾದ ‘ವ್ಯಾಘ್ರಗೀತೆ’ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಹುಲಿಯಿಂದ ತಪ್ಪಿಸಿಕೊಳ್ಳಬೇಕೆಂದು ಶಾನುಭೋಗರು ತಮ್ಮ ಬಳಿಯಿದ್ದ ಖಿರ್ದಿ ಪುಸ್ತಕವನ್ನು ಅದರ ಮುಖಕ್ಕೆ ಬೀಸಿದರು. ಅದು ಗಾಬರಿಯಾಗಿದ್ದ ಸಂದರ್ಭ ಬಳಸಿ ಓಡಿ ಹೋಗುತ್ತಿದ್ದಾಗ ಕಲ್ಲು ಎಡವಿ ಬಿದ್ದು ಮೂರ್ಛೆಹೋದರು. ಅಷ್ಟರಲ್ಲಿ ಅಲ್ಲಿಗೆ ರೈತರು ಬಂದಿದ್ದರಿಂದ ಹಿಲಿ ಅಲ್ಲಿಂದ ಪಲಾಯನ ಮಾಡಿತು. ಆದರೂ ಶಾನುಭೋಗರ ಮನಸ್ಸಿನಲ್ಲಿ ಸಂಶಯವೊಂದು ಕಾಡುತ್ತಿತ್ತು. ನಿಸ್ಸಹಾಯಕರಾಗಿ ಪ್ರಜ್ಞೆಯಿಲ್ಲದೆ ಬಿದ್ದಾಗಲೂ ಹುಲಿ ಇವರನ್ನು ಏಕೆ ಎಳದೊಯ್ಯಲಿಲ್ಲ ಎಂದು ಯೋಚಿಸಿದ ಅವರು ಗಾಡಿಯವನ್ನು ಮೇಲಿನಂತೆ ಕೇಳಿದರು. ಆದರೆ ಶಾನುಭೋಗರು ಬೆನ್ನು ಮೇಲಾಗಿ ಬಿದ್ದುದರಿಂದ ಹುಲಿಯು ತನ್ನ ಕುಲಧರ್ಮ ಪಾಲಿಸಿದ್ದರಿಂದ ಶಾನುಭೋಗರು ಹುಲಿಯಿಂದ ಪಾರಾಗಿದ್ದರು.

3. “ಜೀಯಹಸಾದವೆಂಬುದು ಕಷ್ಟನಿನಗೆಂದ”.

ಉತ್ತರ: – ಈ ಸಾಲನ್ನು ಕುಮಾರವ್ಯಾಸ ಕವಿಯು ಬರೆದಿರುವ ‘ಕೌರವೇಂದ್ರನ ಕೊಂದೆನೀನು’ಎಂಬ ಕಾವ್ಯದಿಂದ ಆರಿಸಲಾಗಿದೆ . (1)

ಈ ಮಾತನ್ನು ಶ್ರೀಕೃಷ್ಣನು ಕರ್ಣನಿಗೆ ಹೇಳಿದನು . ($^1/_2$)

ಶ್ರೀಕೃಷ್ಣನು ಕರ್ಣನಿಗೆ ನಾನು ನಿನ್ನನ್ನು ಹಸ್ತಿನಾಪುರದ ರಾಜನನ್ನಾಗಿ ಮಾಡುವೆ ಆಗ ಪಾಂಡವರು ಮತ್ತು ಕೌರವರು ಇಬ್ಬರೂ ನಿನ್ನನ್ನು ಸ್ವೀಕರಿಸುತ್ತಾರೆ. ಎರಡೂ ವಂಶದವರೂ ನಿನ್ನ ಸೇವಕರಾಗುತ್ತಾರೆ. ನೀನು ಸಿಂಹಾಸನದ ಮೇಲೆ ಕುಳಿತಿರುವಾಗ ಸಿಂಹಾಸನದ ಎಡಭಾಗದಲ್ಲಿ ಕೌರವರು ಬಲಭಾಗದಲ್ಲಿ ಪಾಂಡವರು, ಮುಂಭಾಗದಲ್ಲಿ ಮದ್ರ , ಮಾಗಧದೇಶದ ರಾಜರೂ ಯದುವಂಶದವರೂ ಇರುವ ರಾಜ ವೈಭವವನ್ನು ಕಲ್ಪಿಸಿಕೊ , ಅದನ್ನು ಬಿಟ್ಟು ದುರ್ಯೋಧನನ ಎಂಜಲಿಗೆ ಕೈ ಚಾಚುವ ಮತ್ತು ಅವನು ಮಾತನಾಡಿಸಿದಾಗ ‘ಸ್ವಾಮಿ ತಮ್ಮ ಅನುಗ್ರಹ’ಎಂದು ಕೌರವನನ್ನು ಬೇಡುವ ಸ್ಥಿತಿ ನಿನಗೆಬರುವುದಿಲ್ಲ , ಅರಸನಾಗುವ ಎಲ್ಲಾ ಅರ್ಹತೆಗಳನ್ನು ನೀನು

www.careerindia.com

CAREERINDIA

ಹೊಂದಿದ್ದರೂ ದುರ್ಯೋಧನನ ಬಳಿ ಸೇವಕನಂತೆ ನಿಲ್ಲುವುದು ಪರಾಕ್ರಮಿಯಾದ ನಿನಗೆ ಸರಿಯೇ ಎಂದು ಹೇಳಿದನು . ($1^1/_2$)

ಅಥವಾ

. ಉತ್ತರ:-ಈ ವಾಕ್ಯವನ್ನು ದು. ಸರಸ್ವತಿ ಬರೆದಿರುವ 'ಸಂಕಟಕ್ಕೆ ಗಡಿ ಇಲ್ಲ'ಎಂಬ ಪದ್ಯಭಾಗದಿಂದ ಆರಿಸಲಾಗಿದೆ. (1)

ಈ ಮಾತನ್ನು ಕವಯತ್ರಿ ದು. ಸರಸ್ವತಿಯವರು ಹೇಳಿದ್ದಾರೆ. ($^1/_2$)

ಮಾನವ ತನಗಿರುವ ಬುದ್ಧಿಶಕ್ತಿ ಮತ್ತು ಮಾತಿನ ಶಕ್ತಿಯಿಂದ ತಾನೇ ಸರ್ವಾಧಿಕಾರಿ , ತನಗೆ ಮಾತ್ರಈ ಭೂಮಿಯ ಹಕ್ಕಿದೆ ಎಂದು ಭ್ರಮಿಸಿದ್ದಾರೆ. ಅದೇ ಅಹಂಕಾರದಿಂದ ಮಾನವ ಗೆರೆ ಎಳೆದು ಗಡಿಯನ್ನು ನಿರ್ಮಿಸಿಕೊಂಡು ಬೀಗಲು ಆರಂಭಿಸಿದನು. ಹೀಗೆ ಗಡಿ ಎಳೆದುಕೊಂಡವರ ನಡುವೆ ಕಾದಾಟ ಪ್ರಾರಂಭವಾಯಿತು. ಎರಡೂ ಕಡೆ ರಕ್ತಪಾತವಾಯಿತು. ಗಡಿಯ ಇಂದ್ರಜಾಲದಿಂದ ಪ್ರಾಣಬಿಟ್ಟವರು 'ವೀರಮರಣ'ಹೊಂದಿದವರೆನಿಸಿದರು. ಜೀವತೆಗೆದವರು(ಕೊಂದವರು) ವೀರಯೋಧ(ಶೂರಸೈನಿಕ) ಎಂದು ಹೆಸರು ಪಡೆದರು ಎಂದು ಕವಯತ್ರಿ ಹೇಳಿದ್ದಾರೆ.

ಶರೀರಗಳಿಗೆ ಅನುಭವವಾಗುವ ದು:ಖಕ್ಕೆ , ಯಾವ ಎಲ್ಲೆಯೂ – ಅತ್ತ ಇತ್ತ ಕಡೆ ಎನ್ನುವುದೇನೂ ಇಲ್ಲ .

($1^1/_2$)

4. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು ?

ಉತ್ತರ:- ಪೂಜೆಯಿಂದ ಅಲಂಕೃತಗೊಂಡ ಶ್ರೀರಾಮನ ಅಶ್ವಮೇಧ ಯಾಗದ ಕುದುರೆಯ ಹಣೆಯ ಮೇಲೆ ಶೋಭಿಸುತ್ತಿದ್ದ ಪಟ್ಟಿಯಲ್ಲಿ 'ಕೌಸಲ್ಯಯು ಹೆತ್ತ ಮಗನಾದ ರಾಮನೊಬ್ಬನೇ ಭೂಮಿಯಲ್ಲಿ ಶೂರನಾಗಿದ್ದಾನೆ . ಇದು ಆತನ ಯಾಗದ ಕುದುರೆ ಸಮರ್ಥರಾದವರು ಯಾರಾದರೂ ಅದನ್ನು ತಡೆಯಲಿ' ಎಂಬ ಬರಹವನ್ನು ಬರೆಯಲಾಗಿತ್ತು . (3)

**VIII.** ಈ ಕೆಳಗಿನ ಪ್ರಶ್ನೆಗಳಿಗೆ 7–8 ವಾಕ್ಯಗಳಲ್ಲಿ ಉತ್ತರಿಸಿ. 8

1. ಕವಿ ಸಿದ್ಧಲಿಂಗಯ್ಯ ಹೇಳಿದ ಕತೆಯನ್ನು ಬರೆಯಿರಿ.

www.careerindia.com

CAREERINDIA

ಉತ್ತರ:-ಕವಿ ಸಿದ್ಧಲಿಂಗಯ್ಯನವರು ಹೇಳಿದ ಕತೆ ಯಾವುದೆಂದರೆ , ಒಂದು ಊರಿನಲ್ಲಿ ಒಂದು ಸಲ ಗ್ರಾಮದ ಜನರೆಲ್ಲಾ ಸೇರಿ ತಮ್ಮ ದೇವತೆಗೆ ಗುಡಿ ಕಟ್ಟಲು ಆರಂಭಿಸುತ್ತಾರೆ . ಹೀಗೆ ಕಟ್ತಾ ಚಾವಣಿ ಮಟ್ಟಕ್ಕೆ ಆ ಗುಡಿ ಬಂದಾಗ ಒಬ್ಬನ ಮೈಮೇಲೆ ಆ ದೇವತೆ ಮಂಚಮ್ಮ ಆವಾಹಿಸಿಕೊಂಡು "ನಿಲ್ಸಿ ನನ್ ಮಕ್ಕಳಾ"ಎಂದು ಅಬ್ಬರ ಮಾಡುತ್ತಾಳೆ. ಆ ಅಬ್ಬರಕ್ಕೆ ಜನ ತಮ್ಮ ಕೆಲಸ ನಿಲ್ಲಿಸಿ ಕಕ್ಕಾಬಿಕ್ಕಿಯಾಗಿ ನೋಡುತ್ತಿರಲು ಆ ದೇವತೆ ಹಾಗೂ ಆ ಜನರ ನಡುವೆ ಮಾತುಕತೆ ನಡೆಯುತ್ತದೆ . ಆ ದೇವತೆ ಅಲ್ಲಿದ್ದ ಜನರಿಗೆ 'ಏನ್ರಯ್ಯಾ ಏನ್ ಮಾಡ್ತಾ ಇದ್ದೀರಿ ?'ಎಂದಾಗ ಒಬ್ಬ 'ನಿನಗೊಂದು ಗುಡಿಮನೆ ಕಟ್ತಾ ಇದ್ದೀನಿ ತಾಯಿ'ಎನ್ನುವನು ಆಗ ದೇವತೆ 'ಓಹೋ, ನನಗೇ ಗುಡಿಮನೆ ಕಟ್ತಾಇದ್ದಿರೋ ? ಹಾಗಾದರೆ ನಿಮಗೆಲ್ಲಾ ಮನೆ ಉಂಟಾ ನನ್ನ ಮಕ್ಕಳಾ?'ಎಂದಾಗ ಅಲ್ಲಿದ್ದ ಒಬ್ಬ 'ನನಗಿಲ್ಲ ತಾಯಿ'ಎನ್ನುವನು ಆಗ ಆ ದೇವತೆ 'ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ'ಎನ್ನುವಳು. ಅಂದಿನಿಂದ ಮಂಚಮ್ಮದೇವಿ ಮನೆಮಂಚಮ್ಮ ಎಂಬ ಹೆಸರನ್ನು ಪಡೆಯುತ್ತಾಳೆ . ಚಾವಣಿ ಇಲ್ಲದ ಗುಡಿಯಲ್ಲಿ ತಾಯಿ ಮನೆಮಂಚಮ್ಮ ಇಂದು ಪೂಜಿತಳಾಗುತ್ತಾಳೆ. ಜನರಿಗಿಲ್ಲದ ಮನೆ ತನಗೂ ಬೇಡ ಎಂದೂ ಸಮಾನತೆಯನ್ನು ಮೆರೆಸುತ್ತಾಳೆ. (4)

ಅಥವಾ

- ವೃಕ್ಷಸಾಕ್ಷಿ ಗದ್ಯಭಾಗದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು ಮತ್ತು ಏಕೆ ?

  ಉತ್ತರ:- ಇಲ್ಲಿ ವಿದ್ಯಾರ್ಥಿಗಳು ಯಾವ ಪಾತ್ರವನ್ನು ಮೆಚ್ಚಿದ್ದಾರೆ ಎಂಬ ವಿವರಣೆಯ ಸೂಕ್ತತೆಯನ್ನು ಗಮನಿಸಿ .

  ಪಾತ್ರಗಳು:- ದುಷ್ಟಬುದ್ಧಿ , ಧರ್ಮಬುದ್ಧಿ , ಮರ , ಧರ್ಮಾಧಿಕಾರಿಗಳು , ಪ್ರೇಮಮತಿ.

2. ಉತ್ತರ:- ಜೀವನದಲ್ಲಿ ಧನಾತ್ಮಕ ಭಾವನೆಯನ್ನು , ಧೃಢಸಂಕಲ್ಪವನ್ನು ಹೊಂದಿರಬೇಕು. ಕೇವಲ ಸಂಕಲ್ಪ ಮಾತ್ರದಿಂದ ಯಾವ ಕಾರ್ಯಗಳು ಪೂರ್ಣಗೊಳ್ಳುವುದಿಲ್ಲ. ನಿರ್ಧಾರ ಮಾಡಿದ ಕೆಲಸಗಳನ್ನು ಅನುಷ್ಠಾನಕ್ಕೆ ತಂದಾಗ ಮಾತ್ರ ಕಾರ್ಯಗಳು ಸಫಲವಾಗುತ್ತವೆ , ನಾವು ನಿರ್ಧರಿಸಿದ ಗುರಿಯನ್ನು ಮುಟ್ಟಲು ಸಾಧ್ಯವಾಗುತ್ತದೆ. ಈ ಅಂಶವನ್ನು ಕವಿ ಸಂಕಲ್ಪಗೀತೆ ಪದ್ಯದ ಮೂಲಕ ಸಂಕಲ್ಪವನ್ನು ಯಾವ ರೀತಿ ಅನುಷ್ಠಾನಗೊಳಿಸಬೇಕೆಂದು ತಿಳಿಸಿದ್ದಾರೆ.

www.careerindia.com

ಈಗ ಜಗತ್ತಿನಲ್ಲಿ ಎಲ್ಲೆಲ್ಲೂ ಅಶಾಂತಿಯೆಂಬ ಕತ್ತಲು ಆವರಿಸಿದೆ. ಅಶಾಂತಿಯೆಂಬ ಕತ್ತಲೆಯನ್ನು ನಿವಾರಿಸಲು ನಾವು ಪ್ರೀತಿಯೆಂಬ ಹಣತೆಯನ್ನು ಹಚ್ಚಿ ಸಾಮರಸ್ಯದ ಬೆಳಕನ್ನು ಎಲ್ಲೆಡೆ ಬೆಳಗಿಸೋಣ . ಯುದ್ಧ , ಜಗಳವೆಂಬ ಬಿರುಗಾಳಿಗೆ ಸಿಲುಕಿ ಅಲುಗಾಡುತ್ತಿರುವ ಹಡಗನ್ನು ಎಚ್ಚರಿಕೆಯಿಂದ ಮುಂದಕ್ಕೆ ನಡೆಸೋಣ . ಶುದ್ಧವಾದ ನದಿ ನೀರಿಗೆ ಕೊಳಕು ಸೇರಿ ನೀರು ಕಲುಷಿತವಾಗಿದೆ. ಮುಂಗಾರಿನ ಮಳೆಯ ನೀರಿನ ಹಾಗೆ ನದಿಯ ಜಲವನ್ನು ಸ್ವಚ್ಛ ಮಾಡೋಣ. ಕಾಡುಮೇಡುಗಳು ಹಸಿರು ಮರಗಿಡಗಳಿಲ್ಲದೆ ಬರಡಾಗಿದೆ. ಬರಡಾಗಿರುವ ಆ ಭೂಮಿಯಲ್ಲಿ ಗಿಡಮರಗಳನ್ನು ನೆಟ್ಟು ಭೂಮಿಯನ್ನು ಸಸ್ಯಶ್ಯಾಮಲೆಯನ್ನಾಗಿ ಮಾಡೋಣ. ಕೆಳಗೆ ಬಿದ್ದಿರುವ ಬಡವರು , ದುರ್ಬಲರು , ಅನಾಥರು ಮೊದಲಾದವರನ್ನು ಮೊದಲು ಎಬ್ಬಿಸಿ, ಕೈಹಿಡಿದು ಮೇಲಕ್ಕೆತ್ತಬೇಕು. ಅವರಿಗೆ ಸಹಾಯ ಮಾಡಿ ಅವರು ಸಮಾಜದಲ್ಲಿ ತಲೆ ಎತ್ತಿ ಬಾಳುವಂತೆ ಮಾಡಬೇಕು, ಹೊಸ ಭರವಸೆಗಳನ್ನು ಅವರಲ್ಲಿ ತುಂಬಿಸಬೇಕು. ಮನುಷ್ಯ ಮನುಷ್ಯರ ನಡುವೆ ಇರುವ ಅಡ್ಡಗೋಡೆಗಳನ್ನು ಕೆಡವಿ , ಅವರನ್ನು ಒಂದುಗೂಡಿಸುವ ಸೇತುವೆಯಾಗಬೇಕು. ಪ್ರಪಂಚದಲ್ಲಿರುವ ಎಲ್ಲಾ ಮತಗಳು ಪಥಗಳು. ಅವು ಮನುಷ್ಯರು ನಡೆಯಬೇಕಾಗಿರುವ ಉತ್ತಮ ದಾರಿಗಳಾಗಿವೆಯೇ ಹೊರತು , ಹೊಡೆಯುವ , ಹೊಡೆದಾಡುವ ಮಾರ್ಗಗಳಲ್ಲ ಎನ್ನುವ ಎಚ್ಚರಿಕೆಯಲ್ಲಿ ನಾವು ಮುನ್ನಡೆಯಬೇಕು. ಮನುಷ್ಯರ ಮನಸ್ಸಿನಲ್ಲಿ ಭಯ , ಆತಂಕ ಸಂಶಯಗಳು ಮನೆಮಾಡಿ, ನಮ್ಮ ಅಂತರಂಗದ ದೃಷ್ಟಿಯನ್ನು ಮಸುಕುಮಾಡಿವೆ. ಅವೆಲ್ಲಾವನ್ನು ಹೋಗಲಾಡಿಸಿ ನಾಳಿನ ಉತ್ತಮ ಭವಿಷ್ಯಕ್ಕಾಗಿ ಸುಂದರ ಶುಭದ ಕನಸುಗಳನ್ನು ಬಿತ್ತಬೇಕು ಎಂದು ಕವಿ ಜಿ.ಎಸ್. ಶಿವರುದ್ರಪ್ಪನವರು ಸಂಕಲ್ಪ ಮತ್ತು ಅನುಷ್ಠಾನದ ಬಗ್ಗೆ ತಿಳಿಸಿದ್ದಾರೆ. (4)

ಅಥವಾ

ಉತ್ತರ:– ಕರ್ಣನು ತಾನು ಜನ್ಮತ: ಸೂತಪುತ್ರನೆಂದೆ ತಿಳಿದಿದ್ದನು. ಆದರೆ ಶ್ರೀಕೃಷ್ಣನು ಕರ್ಣನನ್ನು ಮಾನಸಿಕವಾಗಿ ಕುಗ್ಗಿಸಲು ಅವನು ಕುಂತಿಯ ಪುತ್ರ ಎಂಬ ಜನ್ಮರಹಸ್ಯವನ್ನು ತಿಳಿಸಿ ಪಾಂಡವ ಮತ್ತು ಕೌರವರಲ್ಲಿ ನೀನೇ ಹಿರಿಯನೆಂದು , ಪಾಂಡವರು ಅವನ ಸೋದರರೆಂದು ತಿಳಿಸಿದನು . ಇದನ್ನು ಕೇಳಿ ಕರ್ಣನಿಗೆ ಆಘಾತವಾಯಿತು. ಇದುವರೆಗೂ ದುರ್ಯೋಧನನ ಶತ್ರುವಾದ ಪಾಂಡವರನ್ನು ಕರ್ಣನು ತನ್ನ ವೈರಿಗಳೆಂದು ನಂಬಿದ್ದನು. ಆಶ್ರಯ ನೀಡಿದ ದುರ್ಯೋಧನನಿಗೆ ತನ್ನ ಪ್ರಾಣ ಕೊಡಲು ಸಿದ್ಧನಿದ್ದನು . ತನ್ನ ಸ್ವಾಮಿಯ ಋಣ ತೀರಿಸಬೇಕೆಂಬುದೇ ಕರ್ಣನ ಸಂಕಲ್ಪವಾಗಿತ್ತು . ಹೀಗಿರುವಾಗ ಕೃಷ್ಣನಿಂದ ಜನ್ಮರಹಸ್ಯ ತಿಳಿದ ಕೂಡಲೇ ಕರ್ಣನ ಕುತ್ತಿಗೆಯ ನರಗಳು ಬಿಗಿದವು . ಕಣ್ಣೀರು ಹೆಚ್ಚಾಯಿತು, ದುರ್ಯೋಧನನಿಗೆ ಕೇಡು ಸಂಭವಿಸಿತು

www.careerindia.com

ಎಂದುಕೊಂಡನು . ಕೃಷ್ಣನೊಡನೆ ವೈರವು ಹೊಗೆಯನ್ನು ಸುಡದೇ ಹೋಗುತ್ತದೆಯೇ , ನನ್ನ ಜನ್ಮರಹಸ್ಯವನ್ನು ಹೇಳಿ ನನ್ನನ್ನು ಸಾಯಿಸಿದೆ ಎಂದು ಮನದಲ್ಲೇ ನೊಂದನು. ನಾನು ಪಾಂಡವರನ್ನು ಕೊಲ್ಲುವಂತಿಲ್ಲ. ಪಾಂಡವರು ಬದುಕಿದರೆ ಕೌರವನಿಗೆ ಉಳಿಗಾಲವಿಲ್ಲ. ಕೃಷ್ಣನು ನನಗೆ ಎಂತಹ ಸ್ಥಿತಿಯನ್ನು ತಂದಿಟ್ಟನೆಂದು ಕರ್ಣನು ಅತಿಯಾಗಿ ನೊಂದುಕೊಂಡನು.

ವೀರ ಕೌರವರಾಯನೇ ನನಗೆ ಒಡೆಯನು, ಆತನ ಶತ್ರುಗಳೇ ನನ್ನ ಶತ್ರುಗಳು, ಅವನ ಅಭಿಮಾನವೇ(ಹೊಗಳಿಕೆಯೇ) ನನಗೆ ಅಭಿಮಾನ. ಅವನಿಗೆ ಆಗುವುದೇ ನನಗೆ ಆಗಲಿ, ಕೃಷ್ಣನೇ ಕೇಳು, ನಾಳೆ ಯುದ್ಧ ಭೂಮಿಯಲ್ಲಿ ನನ್ನ ಭುಜಬಲಶೌರ್ಯದ ಪರಾಕ್ರಮವನ್ನು ಪಾಂಡುತನಯ(ಪಾಂಡವರು)ರ ಮೇಲೆ ತೋರುವೆನು , ನಾಳೆ ಬರಲಿರುವ ಭಾರತ ಯುದ್ಧವು ಮಾರಿಗೆ ಔತಣವಾಗುವುದು. ಆ ಯುದ್ಧದಲ್ಲಿ ಚತುರಂಗ ಬಲವನ್ನು ಸೋಲಿಸಿ , ಅಸಂಖ್ಯಾತ ಯೋಧರನ್ನು ಸಾಯಿಸಿ ನನ್ನ ಒಡೆಯ ದುರ್ಯೋಧನನಿಗಾಗಿ ನನ್ನ ದೇಹವನ್ನು ಬಲಿಕೊಡುವೆನು, ನಿನ್ನ ಧೀರರಾದ ಪಾಂಡವರನ್ನು ಸೂರ್ಯನಾಣೆಯಾಗಿಯೂ ನೋಯಿಸುವುದಿಲ್ಲ ಎಂದು ಕರ್ಣನು ಕೃಷ್ಣನಿಗೆ ಹೇಳಿದನು. (4)

**IX.** ಈ ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ. ( 5 ಅಂಕಗಳು )

1.ನಮ್ಮ ದೇಶ ನೂರಾರು ವರ್ಷಗಳಿಂದ ಎದುರುಸುತ್ತಿರುವ ಹಲವು ಕ್ಲಿಷ್ಟ ಸಮಸ್ಯೆಗಳನ್ನು, ಜಾತಿಯಂತಹ ಸಾಮಾಜಿಕ ಪಿಡುಗುಗಳನ್ನು ವೈಜ್ಞಾನಿಕ ಮನೋಭಾವದಿಂದ ಪರಿಹರಿಸಲು ಸಾಧ್ಯ. ಆಗ ಮಾತ್ರ ಮಾನವೀಯ ಮೌಲ್ಯ ಹಾಗೂ ನೀತಿಯಾಧಾರಿತ ವಿಶ್ವಧರ್ಮ ಸಾಧ್ಯ ಎಂದು ಲೇಖಕರು ವಿವರಿಸಿದ್ದಾರೆ. (1)

2. ಶ್ರವಣ ಬೆಳಗೊಳದ ದೊಡ್ಡ ಬೆಟ್ಟ ಚಿಕ್ಕ ಬೆಟ್ಟಗಳ ನಡುವೆ ವಿಸ್ತಾರವಾದ ಬಿಳಿಯ ಕೊಳವಿದೆ. (1)

3. ಉತ್ತರ: – ವ್ಯಕ್ತಿಗೆ ಶಾಸನಗಳನ್ನು ರಚಿಸುವ , ಸರಕಾರಗಳ ಸ್ಥಾಪನೆ ಮಾಡುವ , ವಿಸರ್ಜನೆಗಳಲ್ಲಿ ಪಾಲು ಇರುವ ಹಕ್ಕಿನಲ್ಲಿ ರಾಜಕೀಯ ಸ್ವಾತಂತ್ರ್ಯವಿರುತ್ತದೆ. ಸರ್ಕಾರವು ಜನರಿಂದಲೇ ತನ್ನ ಅಧಿಕಾರವನ್ನೂ , ಬಲವನ್ನೂ ಪಡೆಯುತ್ತದೆ. ಆಳಲ್ಪಡುವವರ ಸಮ್ಮತಿಯಿಂದಲೇ ಸರ್ಕಾರದ ಅಸ್ಥಿತ್ವವಿದೆ . ವ್ಯಕ್ತಿಗೆ ತನ್ನ ಸಾರ್ವಜನಿಕವಾದ ಹಾಗೂ ಖಾಸಗಿಯಾದ ಜೀವನವನ್ನು ನಿರ್ದೇಶಿಸುವ , ನಿಯಂತ್ರಿಸುವ ಸಾಮರ್ಥವನ್ನು ರಾಜಕೀಯ ಸ್ವಾತಂತ್ರ್ಯ ನೀಡುತ್ತದೆ . ಇದೇ ರಾಜಕೀಯ ಸ್ವಾತಂತ್ರ್ಯದ ಮಹತ್ವ . (1)

www.careerindia.com

CAREERINDIA

4. ಉತ್ತರ:- ಗಾಂಧೀಜಿಯವರು ಇಂಗ್ಲೆಂಡಿಗೆ ಹೋಗುವವರೆಗೂ ಅಂದವಾದ ಅಕ್ಷರ , ಒಳ್ಳೆಯ ಬರವಣಿಗೆ , ಶಿಕ್ಷಣದ ಅವಶ್ಯಕ ಅಂಶ ಅಲ್ಲವೇ ಅಲ್ಲ ಎಂಬ ಭಾವನೆ ಇತ್ತು . ಆನಂತರ ಅವರು ದಕ್ಷಿಣ ಆಫ್ರಿಕಾಕ್ಕೆ ಹೋದ ಮೇಲೆ , ಅಲ್ಲಿ ಸುಶಿಕ್ಷಿತ ಯುವಕರ ಮತ್ತು ವಕೀಲರ ಮುತ್ತು ಪೋಣಿಸಿದಂತಿದ್ದ ಸುಂದರ ಬರವಣಿಗೆಯನ್ನು ನೋಡಿ ನಾಚಿಕೆಯೂ , ಪಶ್ಚಾತ್ತಾಪವೂ ಆಯಿತು . ಕೆಟ್ಟ ಅಕ್ಷರದ ಬರವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ ಎಂದು ಅರಿತರು . ಒಳ್ಳೆಯ ಬರವಣಿಗೆ ಶಿಕ್ಷಣಕ ಅತಿ ಮುಖ್ಯ ಎಂಬುದನ್ನು ತಿಳಿದರು . (1)

5. ಒಗಟುಗಳು ಜನಪದ ಸಾಹಿತ್ಯದ ಒಂದು ಪ್ರಕಾರ. ಒಗಟು ಬುದ್ಧಿ ಸಾಮರ್ಥ್ಯದ ಪರೀಕ್ಷೆಯಾಗಿದೆ. ಒಗಟುಗಳಲ್ಲಿ ಉತ್ತರ ಗುಪ್ತವಾಗಿ ಅಡಗಿರುತ್ತದೆ. ಅನುಭವ, ತರ್ಕ, ವಿಚಾರಗಳನ್ನು ಬಳಸಿ ಉತ್ತರಗಳನ್ನು ಕಂಡು ಹಿಡಿಯಬೇಕಾಗುತ್ತದೆ. ವಿದ್ಯಾರ್ಥಿಗಳ ಬುದ್ಧಿಯನ್ನು ಅಳೆಯಲೂ, ವಿಚಾರಶೀಲರನ್ನಾಗಿಸಲೂ, ಗಮನವನ್ನು ಏಕಚಿತ್ತಗೊಳಿಸಲು ವಿಚಾರಗಳ ಹೊರೆಯ ರಂಜನೆಯತ್ತ ಹೊರಳಿಸಲೂ ಒಗಟುಗಳಿಂದ ಸಹಾಯವಾಗುತ್ತದೆ. (1)

**************

www.careerindia.com